

# ಮನ್ನೆಕೆನ್ ಪಿಸ್

## ಜನ ಮರುಳೋ ಕಲೆ ಮರುಳೋ

ಮೂತ್ರ ಮಾಡುತ್ತಿರುವ ಪುಟ್ಟ ಬಾಲಕನ ಪ್ರತಿಮೆ ಬೆಲ್ಜಿಯಂನ ಬ್ರುಸೆಲ್ಸ್ ನಗರದ ಆಕರ್ಷಣೆಗಳಲ್ಲೊಂದು. ಈ ಕಲಾಕೃತಿ ಸಹೃದಯರು ಹಾಗೂ ಕಲಾಸಕ್ತರ ಗಮನ ಮಾತ್ರವಲ್ಲ, ಚೋರರ ಗಮನವನ್ನೂ ಸೆಳೆದಿದೆ.

■ ಕೆ.ಪಿ. ಸತ್ಯನಾರಾಯಣ

ಬೆಲ್ಜಿಯಂ ದೇಶದ ರಾಜಧಾನಿ ಬ್ರುಸೆಲ್ಸ್. ಯೂರೋಪಿಯನ್ ಒಕ್ಕೂಟದ ಅನೇಕ ಆಡಳಿತ ಕಚೇರಿಗಳು ಇರುವುದರಿಂದಾಗಿ ಬ್ರುಸೆಲ್ಸ್‌ಗೆ 'ಯೂರೋಪಿನ ರಾಜಧಾನಿ' ಎನ್ನುವ ವಿಶೇಷಣದಿಂದ ಗುರ್ತಿಸುತ್ತಾರೆ. 'ಯೂರೋಪಿನ ಹೃದಯ' ಎನ್ನುವ ವಿಶೇಷಣವೂ ಆ ನಗರಕ್ಕಿದೆ.

ಆಕರ್ಷಕ ಐತಿಹಾಸಿಕ ಕಟ್ಟಡಗಳಿಂದ, ಚಾಕೊಲೇಟ್ ಅಂಗಡಿಗಳಿಂದ, ಪ್ರತಿನಿತ್ಯ ನಡೆಯುವ ಹೂಗಳ ಮಾರುಕಟ್ಟೆಯಿಂದ ಬ್ರುಸೆಲ್ಸ್ ಪ್ರಸಿದ್ಧ. ಅಲ್ಲಿನ ಗ್ರಾಂಡ್ ಸ್ಕ್ವೇರ್‌ನಲ್ಲಿ ಪ್ರತಿ ವರ್ಷ ಆಗಸ್ಟ್ ತಿಂಗಳಿನಲ್ಲಿ ಹೂಗಳಿಂದ ಮಾಡಿದ ಕಾರ್ಪೆಟ್ ಕಲಾಪ್ರೇಮಿಗಳನ್ನು ತನ್ನತ್ತ ಸೆಳೆಯುತ್ತದೆ. ವಿಕ್ಟರ್ ಹೋರ್ಟಾ (**Victor Horta**) ಅವರ ವಾಸ್ತು ಪ್ರದರ್ಶನ ಗ್ಯಾಲರಿಯೂ ಅಲ್ಲಿರುವುದು ನಗರದ ಸಾಂಸ್ಕೃತಿಕ ಹೊಳಪನ್ನು ಹೆಚ್ಚಿಸಿದೆ.

ಕಿರಿದಾದ ರಸ್ತೆಗಳಲ್ಲಿ ನಡೆಯುತ್ತಲೇ ನಗರದ ಸೌಂದರ್ಯವನ್ನು ಸವಿಯುವುದು ಖುಷಿ ಕೊಡುವ ಅನುಭವ. 1958ರಲ್ಲಿ ನಡೆದ **Brussels World Expo 58** ಕಾರ್ಯಕ್ರಮಕ್ಕಾಗಿ ನಿರ್ಮಾಣಗೊಂಡ 'ಆಟೋಮಿಯಮ್' ಎಂಬ ಕಲಾಕೃತಿಯಂತಹ ಕಟ್ಟಡವೂ ನಗರದ ಸೌಂದರ್ಯಕ್ಕೆ ಮೆರುಗು ತಂದಿದೆ. ಬ್ರುಸೆಲ್ಸ್